

ಸಾಂದರ್ಭಿಕ ಚಿತ್ರ: ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಿಂದೂ ರುದ್ರಭೂಮಿ.

ಹಣ ಬರುವುದಕ್ಕಿಂತ ಮುಂಚೆಯೇ ಆಕೆಯ ಪ್ರಾಣ ಹೋಯಿತು. ಗೃಹಲಕ್ಷ್ಮಿಯ ಹಣದ ಮೇಲಿನ ಅವಳ ಆಸೆ ಈಡೇರದೆ ಉಳಿದಿತ್ತು ಎಂದು ನಾವು ಅಂದುಕೊಳ್ಳಬಹುದು. ಯಾರಿಗೇ ಆಗಲಿ ಎಲ್ಲ ಆಸೆಗಳು ಈಡೇರಿರುತ್ತವೆ ಎಂದು ಹೇಳಲಾಗದು. ಪಿಂಡವನ್ನು ಯಾವ ಕಾರಣಕ್ಕಾದರೂ ಕಾಗೆ ಬಂದು ಮುಟ್ಟಿದರೆ ಸಂಬಂಧಿಕರಿಗೆ ಒಂದು ಸಮಾಧಾನ. ಕೋಗಿಲೆಗಳು ಬಿಡಿ, ಕನಿಷ್ಠ ಪಕ್ಷ ಕಾಗೆಗಳು ಕುಳಿತುಕೊಳ್ಳುವಂಥ ಸ್ಮಶಾನಗಳನ್ನಾದರೂ ನಮ್ಮ ಸರ್ಕಾರಗಳು ಒದಗಿಸಬೇಕು ಎಂದುಕೊಂಡೆ.

'ತಮ್ಮ ಪಾರ್ಥಿವ ದೇಹವನ್ನು ಸಾಗಿಸುವ ವಾಹನ ಚೆನ್ನಾಗಿರಬೇಕು, ಅದು ಒಂದು ಡಕಲಾಸ್ ಗಾಡಿಯ ಹಾಗೆ ಇರಬಾರದು' ಎಂದು ಎಚ್. ನರಸಿಂಹಯ್ಯನವರು ಲೇಖನ ಬರೆಯುವವರೆಗೆ ಆ ಕಡೆ ಯಾರೂ ಗಮನಹರಿಸಿರಲಿಲ್ಲ. ಆಗ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಇದಕ್ಕಾಗಿ ಒಂದು ಕಪ್ಪು ಗಾಡಿ ಇತ್ತು. ಅದರಲ್ಲಿ ಏನು ಅನುಕೂಲ ಇತ್ತೋ ಇಲ್ಲವೋ ತಿಳಿಯದು. ಆದರೆ, ಅದು ಹೊಗೆ ಉಗುಳುತ್ತ ಹೋಗುವುದನ್ನು ಮತ್ತು ಅದು ಅತ್ಯಂತ ಅನಾಕರ್ಷಕವಾಗಿ ಇದ್ದುದನ್ನು ಕಂಡೋ ಏನೋ ನರಸಿಂಹಯ್ಯನವರು, 'ದಯಮಾಡಿ ನನ್ನ ದೇಹವನ್ನು ಅದರಲ್ಲಿ ಸಾಗಿಸಬೇಡಿ' ಎಂದು ಮನವಿ ಮಾಡಿಕೊಂಡಿದ್ದರು.

ಸ್ಮಶಾನದ ಜಾಗ ಸರ್ಕಾರಕ್ಕೆ ಸೇರಿದ್ದು. ಕಂದಾಯ ಇಲಾಖೆಯಡಿಯಲ್ಲಿ ಅದು ಬರುತ್ತದೆ. ಪ್ರತಿಯೊಂದು ಊರಿಗೂ ಆಯಾ ಸಮುದಾಯಗಳ ಬೇಡಿಕೆಗೆ ತಕ್ಕಂತೆ ಸ್ಮಶಾನ ಜಾಗವನ್ನು ಒದಗಿಸಬೇಕಾದುದು ಸರ್ಕಾರದ ಕರ್ತವ್ಯ. ಬರೀ ಜಮೀನು ಒದಗಿಸಿದರೆ ಸಾಲದು, ತಮ್ಮ ಅಂತಿಮಯಾತ್ರೆಗೆ ಬಳಕೆಯಾಗುವ ವಾಹನ ಸುಸಜ್ಜಿತವಾಗಿಯೂ, ಅಂದವಾಗಿಯೂ ಇರಬೇಕು ಎಂದು ಎಚ್.ಎನ್. ಬಯಸಿದ ಹಾಗೆಯೇ ನನ್ನಂಥವರು ನಮ್ಮ ಅಂತಿಮಸಂಸ್ಕಾರ ನಡೆಯುವ ಜಾಗ ಅಚ್ಚುಕಟ್ಟಾಗಿಯೂ, ವ್ಯವಸ್ಥಿತವಾಗಿಯೂ ಇರಬೇಕು ಎಂದು ಬಯಸುತ್ತೇವೆ. ಆದರೆ, ಅದನ್ನು ಮಾಡಬೇಕಾದ ಶಾಸಕರ, ಸಚಿವರ ಶವಸಂಸ್ಕಾರ ಒಂದೋ ಅವರ ಜಮೀನಿನಲ್ಲಿ ನಡೆಯುತ್ತದೆ. ಅಥವಾ 'ಸಕಲ ಸರ್ಕಾರಿ ಗೌರವಗಳು ಸಲ್ಲಿಕೆಯಾಗುವಾಗ' ಎಲ್ಲವೂ ಸರಿಯಾಗಿ ಇರುತ್ತದೆಯೋ ಏನೋ? ಶಾಸಕರು, ಸಚಿವರು ಆಗೀಗ ಸ್ಮಶಾನಗಳಿಗೆ ಹೋಗಿ ಬರಬೇಕು.

ಶವಸಂಸ್ಕಾರ ಮಾಡಿದ ನಂತರ ಮನೆಯವರ ಕೆಲಸ ಮುಗಿಯುವುದಿಲ್ಲ. ಅಸ್ಥಿ ಆರಿಸಿ ನದಿಗಳು ಕೂಡುವ ಸಂಗಮದಲ್ಲಿ ಬಿಡಬೇಕು. ನಮ್ಮ ಅಸ್ಥಿ ಮತ್ತು ಬೂದಿ ತೆಗೆದುಕೊಂಡು ಹೋಗಿ ನದಿಯಲ್ಲಿ ವಿಸರ್ಜನೆ ಮಾಡಿದರೆ ಅದು ನದಿಯನ್ನು ಇನ್ನಷ್ಟು ಮಲಿನ ಮಾಡಿದಂತೆಯೇ ಹೊರತು ಸತ್ತವರಿಗೆ ಯಾವ ರೀತಿಯ ಸದ್ಗತಿ ಸಿಗುತ್ತದೆ ಎಂಬುದನ್ನು ತಿಳಿಯೆ. ಆದರೆ, ಇದು ನಂಬಿಕೆಗೆ ಸಂಬಂಧಿಸಿದ ಸಂಗತಿ. ರಾಮದುರ್ಗದಲ್ಲಿ ನಿಧನರಾದ ನಮ್ಮ ಸೋದರಿಯ ಅಸ್ಥಿಯನ್ನು ಆರಿಸಿಕೊಂಡು ನಾವೆಲ್ಲರೂ ಎಂ.ಕೆ. ಹುಬ್ಬಳ್ಳಿ ಬಳಿಯ ಮಲಪ್ರಭಾ ನದಿ ತಟಕ್ಕೆ ಹೋದಾಗ ಅಲ್ಲಿನ ಅವ್ಯವಸ್ಥೆ, ಕೊಚ್ಚೆ ಕಂಡು ನನಗೆ ಒಂದು ಕ್ಷಣ ಗಾಬರಿಯಾಯಿತು.

ಅಸ್ಥಿ ವಿಸರ್ಜನೆ ಮಾಡಿದ ಜನರು ಪೂಜೆ ಮಾಡಿದ ತೆಂಗಿನಕಾಯಿ ಕರಟ, ಕೆಂಪು ವಸ್ತ್ರ, ಊದಿನಕಡ್ಡಿ, ಕುಂಕುಮ, ಅರಿಶಿನ, ಮಾಲೆ — ಹೀಗೆ ಉಳಿದ ಎಲ್ಲ ಸಾಮಾನುಗಳನ್ನು ಎಲ್ಲಿ ಬೇಕೆಂದರಲ್ಲಿ ಬಿಸಾಕಿದ್ದರು. ನದಿತಟದ ಆ ಜಾಗ ಕಸದ ತೊಟ್ಟಿಗಿಂತ ಕಡೆಯಾಗಿತ್ತು. ನದಿಗೆ ಪ್ರವಾಹ ಬಂದರೆ ಅದು ಎಲ್ಲವೂ ನದಿಯ ಒಡಲನ್ನು ಸೇರುತ್ತಿತ್ತು. ಆ ಸ್ಥಿತಿಗೆ ನಾವು ಅಥವಾ ನಮ್ಮಂಥವರು ಕಾರಣರಾಗಿದ್ದೆವು. ಅದೇ ಜಾಗದಲ್ಲಿ ಒಂದು ದೊಡ್ಡ ದೇವಸ್ಥಾನವಿದೆ. 'ಇಲ್ಲಿ ನೀವು ಅಸ್ಥಿ ವಿಸರ್ಜನೆ ಮಾಡಿ ಪುಣ್ಯ ಗಳಿಸಬೇಕು ಎಂದುಕೊಂಡಿದ್ದರೆ ನಿಮಗೆ ಪುಣ್ಯದ ಬದಲು ಪಾಪ ಬರುವ ಸಾಧ್ಯತೆಯೇ ಹೆಚ್ಚು' ಎಂಬ ಫಲಕವನ್ನೂ ಅವರು ಹಾಕಿದ್ದರು. ಆ ಜಾಗ ಬಿಟ್ಟು ನಾವು ಮುಂದೆ ಹೋದೆವು. ನದಿಯನ್ನು ಇನ್ನಷ್ಟು ಮಲಿನಗೊಳಿಸದಂತೆ ಅಸ್ಥಿ ವಿಸರ್ಜನೆಗೆ ವ್ಯವಸ್ಥೆ ಮಾಡಲು ಸರ್ಕಾರಕ್ಕೆ ಕಷ್ಟವೇ?

ಬೆಳಗಾವಿ ಮತ್ತು ರಾಮದುರ್ಗದ ಸ್ಮಶಾನದಲ್ಲಿ ಕೆಲಸ ಮಾಡುವ 'ವೀರಬಾಹು'ಗಳ ಸ್ಥಿತಿ ದಾರುಣವಾಗಿದೆ. ರಾಮದುರ್ಗದ 'ವೀರಬಾಹು'ವಿನ ಸ್ಥಿತಿ ಕಂಡು ನಾನು ಅಳುವುದೊಂದು ಬಾಕಿ. ಅವನು ಅಷ್ಟು ದಯನೀಯವಾದ ಸ್ಥಿತಿಯಲ್ಲಿದ್ದ. ನಮ್ಮ ಮನೆಯವರ ಪಾರ್ಥಿವ ದೇಹಗಳನ್ನು ನಾವು ತೆಗೆದುಕೊಂಡು ಹೋಗುವುದಕ್ಕಿಂತ ಮುಂಚೆ ಅವರು ಆ ಎಲ್ಲ ವ್ಯವಸ್ಥೆಯನ್ನು ಮಾಡಿರದೇ ಇದ್ದರೆ ನಾವು ಶವಸಂಸ್ಕಾರ ಮಾಡುವುದು ಸಾಧ್ಯವೇ ಇರುವುದಿಲ್ಲ. ಅವರಿಗೆ ಸರ್ಕಾರ ಸಂಬಳ ಕೊಡುತ್ತದೆಯೇ? ಕೊಟ್ಟರೆ ಅದು ಅವರು ಮಾಡುವ ಕೆಲಸಕ್ಕೆ ಸೂಕ್ತ ಎನಿಸುವಷ್ಟು ಇರುತ್ತದೆಯೇ? ಸಾರ್ವಜನಿಕರು ಕೊಡುವ ಒಂದಿಷ್ಟು ಬಿಡಿಗಾಸಿನ ಆಸೆಗೆ ಅವರು ಆ ಎಲ್ಲ ಕೆಲಸ ಮಾಡುತ್ತಾರೆಯೇ? ತಿಳಿಯೆ. ಸರೂರಿನ ಸುಡುಗಾಡಿನಲ್ಲಿ ವೀರಬಾಹು ಎನ್ನುವಂಥ ಒಬ್ಬ ವ್ಯಕ್ತಿ ಇರಲೇ ಇಲ್ಲ. ನಿಜವಾಗಿಯೂ ಸಾವು ಎಷ್ಟು ದಾರುಣ ಅಲ್ಲವೇ?

ಪ್ರತಿಕ್ರಿಯಿಸಿ: feedback@sudha.co.in